ಮಾಡುವುದು ಅವರ ದೃಷ್ಟಿಯಲ್ಲಿ ಅಪರಾಧವೇ. ನೀವು ಮಾಡದಿದ್ದರೆ ತಾವೇ ಈರುಳ್ಳಿ ಹೆಚ್ಚಿ ಪಲ್ಯ ಮಾಡಿಕೊಂಡಾರು. ಒಗ್ಗರಣೆ ತಯಾರಿಸಿ ಅನ್ನ ಕಲೆಸಿಕೊಂಡಾರು. ಆದರೆ ಮಧ್ಯಾಹ್ನದ ಸಾರು, ಪಲ್ಯ ಮುಂತಾದ ಪದಾರ್ಥಗಳನ್ನು ಮಾತ್ರ ಸಂಜೆಗೆ ಮುಟ್ಟುವುದಿಲ್ಲ. ಅದು ನಮ್ಮತ್ತೆ, ಮಾವ ರೂಢಿಸಿದ ಪದ್ಧತಿ. ಬದಲಾಯಿಸಲು ನಾನೂ ಶತಾಯಗತಾಯ ಪ್ರಯತ್ನಿಸಿದೆ. ಸಾಧ್ಯವಾಗಲೇ ಇಲ್ಲ. ಕೊನೆಗೆ ಸೋತು ಕೈಚೆಲ್ಲಿಬಿಟ್ಟೆ. ಹ್ಞಾಂ, ಇದಕ್ಕೆ ಮೀಸಲಾತಿಯೂ ಇದೆ ಸ್ವಾಮಿ. ತರತರದ ಹೋಳಿಗೆ, ಕಡುಬು, ಚಿರೋಟಿಗಳಂಥ ಪಕ್ವಾನ್ನಗಳು ಮರುದಿನ ನಡೆಯುವುದಿರಲಿ, ಖುಷಿಯಾಗಿ ಓಡುತ್ತವೆ. ನಿತ್ಯದ ಪದಾರ್ಥಗಳು ಮಾತ್ರ ಸೋತು ಮಲಗುತ್ತವೆ.

ನಾನೂ ಕಡಿಮೆಯಿಲ್ಲ ಬಿಡಿ. ರೂಪಾಂತರಗೊಳಿಸಿ... ಹಳೆಯ ಮಾಲನ್ನು ನವೀಕರಿಸಿ ಅವರಿಗೆ ಗೊತ್ತಿಲ್ಲದಂತೆ ತಿನಿಸಿದ್ದೇನೆ. ಚಪಾತಿಯ ಉಪ್ಪಿಟ್ಟು, ಇಡ್ಲಿ ಫ್ರೈ ಇತ್ಯಾದಿಗಳ ರೂಪದಲ್ಲಿ ಅನೇಕ ಬಾರಿ ಗೊತ್ತಿಲ್ಲದೇ ತಿಂದಿದ್ದಾರೆ. ಗೊತ್ತಾದರೆ, ಕ್ಷಣದಲ್ಲೇ ಅದನ್ನು ದೂರ ಸರಿಸಿ, ನನಗಷ್ಟು ಮಂತ್ರಪುಷ್ಪ ಮಾಡಿ ಧನ್ಯರಾಗುತ್ತಾರೆ. ನಾವು ಬೆಂಗಳೂರಿಗೆ ಬಂದ ಹೊಸತು. ಒಮ್ಮೆ ಹಿಂದಿನ ಮನೆಯವರು ಬೆಳಗ್ಗೆಯೇ ತಿಂಡಿಗೆಂದು ಚಿತ್ರಾನ್ನ ಕೊಟ್ಟರು. ತುಂಬಾ ರುಚಿಯಾಗಿತ್ತು. ಚೆನ್ನಾಗಿ ತಿಂದು ಅವರಿಗೆ ಧನ್ಯವಾದ ಹೇಳಿದಾಗ, "ನಿನ್ನೆ ನೆಂಟರು ಬರುತ್ತಾರೇಂತ ಜಾಸ್ತಿ ಅನ್ನ ಮಾಡಿದ್ದೆವು. ಅವರು ಬರಲೇ ಇಲ್ಲ. ಅನ್ನ ಯಾಕೆ ವೇಸ್ಟ್ ಮಾಡಬೇಕೂಂತ ಚಿತ್ರಾನ್ನ ಮಾಡಿ ನಾವೂ ತಿಂದು, ನಿಮಗೂ ಕೊಟ್ಟಿದ್ದಾಯಿತು" ಎಂದರು. ಮಾರಾಯರ ಮುಖ ನೋಡಬೇಕಿತ್ತು. ಈ ತಂಗಳನ್ನದ ಚಿತ್ರಾನ್ನ ಒಂದು ರೀತಿಯಲ್ಲಿ ಸಾರ್ವತ್ರಿಕ ಬಿಡಿ. ಒಮ್ಮೆ ನೆಂಟರೊಬ್ಬರ ಮನೆಯಲ್ಲಿ, "ಊಟ ಮಾಡಿ ಹೋಗ್ರಪ್ಪಾ. ಇಲ್ಲವಾದರೆ ನಿಮ್ಮ ಪಾಲಿನ ಅನ್ನದ ಚಿತ್ರಾನ್ನವನ್ನ ನಾಳೆ ನಾವು ತಿಂಡಿಗೆ ತಿನ್ನಬೇಕಾಗುತ್ತದೆ" ಎಂದು ಬಲವಂತಪಡಿಸುತ್ತಿದ್ದುದೂ ಇತ್ತು. ಅವರ ಈ 'ತಾಜಾ' ತವಕಕ್ಕೆ ಅದೆಷ್ಟೋ ಬಾರಿ ನಕ್ಕಿದ್ದಿದೆ. ಚಹಾ ಕೂಡ ತಾಜಾ ಹಾಲಿನದ್ದೇ ಆಗಬೇಕು. ಪ್ಯಾಕೆಟ್ ಒಡೆದು ಅದೇ ಹಾಲಿನಲ್ಲಿ ಟೀ ಪುಡಿ ಹಾಕಿ ಕುದಿಸಿದ ಚಹಾ... "ಇದಕ್ಕಿಂತ ಫ್ರೆಶ್ ಬೇಕಾದರೆ ಎಮ್ಮೆಗೆ ಟೀ ಪುಡಿ, ಸಕ್ಕರೆ ತಿನ್ನಿಸಿಬಿಡಿ. ಹಾಲು ಕರೆಯುವಲ್ಲಿ 'ಆ' ಎಂದರಾಯಿತು. ಚಹಾ ಕರೆದೀತು" ಎಂದು ವ್ಯಂಗ್ಯದ ಬಾಣ ಬಿಡುತ್ತೇನೆ. ಅವರಿಗೇನೂ ತಾಕುವುದಿಲ್ಲ ಬಿಡಿ.



ಹೋಟಲ್‌ಗೆ ಹೋದರೂ "ಫ್ರೆಶ್... ಬಿಸಿ ಏನಿದೆಯಪ್ಪ?" ಎಂದು ಕೇಳುವ ಪರಿಪಾಠ ಎಷ್ಟೋ ಜನರದ್ದು. ತರಕಾರಿ, ಹಣ್ಣು, ಕುರುಕಲು ತಿಂಡಿ... ಎಲ್ಲೆಡೆ ಈ ಅಭ್ಯಾಸ ಇದ್ದೇ ಇದೆ. ರೂಢಿ ಬದಲಾಯಿಸುವುದು ಬಲು ಕಷ್ಟ ನೋಡಿ. ಮೊನ್ನೆ ಪತಂಜಲಿ ಅಂಗಡಿಗೆ ಹೋದಾಗಲೂ "ಫ್ರೆಶ್ ಏನು ಬಂದಿದೆಯಪ್ಪ?" ಎಂದರು. "ಗೋಮೂತ್ರ ಇದೀಗ ಫ್ರೆಶ್ ಬಂದಿದೆ ಸಾರ್" ಎನ್ನಬೇಕೆ? ಮುಂದೆ ಮಾರಾಯರದ್ದು ಮಾತೇ ಇಲ್ಲ.

ಆಟಗಳನ್ನೇ ನೋಡಿ. ಈಗ ಭಾರತದಲ್ಲಿ ಪ್ರಮುಖವಾಗಿ ಹರಡಿರುವುದು ಕ್ರಿಕೆಟ್ ಜಾತಿ. ಕೋಟ್ಯಂತರ ಬೆಂಬಲಿಗರಿದ್ದಾರೆ. ಕ್ರಿಕೆಟ್ ಕಲಿಗಳು ಯಶಸ್ವಿಯಾದರೆ ಬೆಳಗಾಗುವಷ್ಟರಲ್ಲಿ ಮನೆಮಾತಾಗುತ್ತಾರೆ. ಅವರ ಹೆಸರಿನ ಟೀಶರ್ಟುಗಳು ಮಾರಾಟವಾಗುತ್ತವೆ. ಪ್ರಪಂಚದ ಪ್ರಮುಖ ಕ್ರೀಡೆಗಳಲ್ಲಿ ಕ್ರಿಕೆಟ್ ಒಂದಾಗಿದ್ದರೂ ಭಾರತದಲ್ಲಿ ಹುಚ್ಚು ಹೆಚ್ಚಾಗಿ ಕ್ರಿಕೆಟ್ ಜಾತಿಗಿಂತ ಮಿಗಿಲಾಗಿ